ಡಯಾಲಿಸಿಸ್ ಯಂತ್ರಗಳನ್ನು ಒದಗಿಸುವುದು

119(2053); ಶ್ರೀ ಪಾಟೀಲ್ ಜೆ.ಟಿ. (ಬೀಳಗಿ)

ಅ) ಬೀಳಗಿ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಖಾಸಗಿಯವರಿಂದ ದಾನವಾಗಿ ಪಡೆದು ಡಯಾಲಿಸಿಸ್ ಯಂತ್ರವನ್ನು ಸ್ಥಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಡಾ: ನಂಜುಡಪ್ಪ ವರದಿಯಂತೆ ಬೀಳಗಿ ತಾಲ್ಲೂಕು, ಅತೀ ಹಿಂದುಳಿದ ತಾಲ್ಲೂಕಿದ್ದು ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಡಯಾಲಿಸಿಸ್ ಯಂತ್ರಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಕೂಡಲೇ ಎರಡು ಡಯಾಲಿಸಿಸ್ ಯಂತ್ರಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಕೊಳ್ಳವುದೇ?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ

ಆ) ಬಂದಿದೆ

ಇ) 2 ಡಯಾಲಿಸಿಸ್ ಯಂತ್ರಗಳನ್ನು ಬೀಳಗಿ ಆಸ್ಪತ್ರೆಗೆ ಕೂಡಲೇ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜೆ.ಟಿ. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ನನ್ನ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಒಂದು ವರ್ಷದಿಂದ ಬೀಳಗಿ ಆರೋಗ್ಯ ಕೇಂದ್ರದಲ್ಲಿ private donor ಕಡೆಯಿಂದ dialyses machine run ಆಗುತ್ತಿದೆ, ಸಾಲುತ್ತಿಲ್ಲ. ಸಾಕಷ್ಟು ಜನ kidney failure ಆದಂಥ patient ಗಳು ಇರುವುದರಿಂದ ಸರ್ಕಾರಿ ಆಸ್ಪತ್ರೆಯಲ್ಲಿ ಪುಕ್ಕಟೆ ಸರ್ವೀಸ್ ಕೊಡುತ್ತಿದ್ದಾರೆ. ಇನ್ನು ಎರಡು dialyses machine ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ ಧನ್ಯವಾದಗಳು ಹೇಳುತ್ತೇನೆ. ನನ್ನ

ಒತ್ತಾಯವೇನೆಂದರೆ, ಅಧಿಕಾರಿಗಳ ಮಟ್ಟದಲ್ಲಿ ಒಂದು ವರ್ಷದಿಂದ ಕೇಳುತ್ತಿದ್ದೇನೆ. ಅಧಿಕಾರಿಗಳು ಒಪ್ಪಿಕೊಂಡಿರುವುದರಿಂದ ಇನ್ನು 15 ದಿವಸದೊಳಗೆ ಎರಡು dialyses machine ಗಳನ್ನು ಬೀಳಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಪೂರೈಸಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಯು.ಟಿ. ಖಾದರ್:– ಮಾನ್ಯ ಸದಸ್ಯರು dialyses machine ಗಳನ್ನು ಕೇಳಿದ್ದಾರೆ ಒಂದು ತಿಂಗಳೊಳಗೆ ಅವುಗಳನ್ನು ಮುಟ್ಟಿಸುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:– ಬರೀ ಬೀಳಗಿ ಮತಕ್ಷೇತ್ರಕ್ಕೆ ಅಷ್ಟೇ ಅಲ್ಲ, ಅದಕ್ಕಿಂತ ನಮ್ಮದು ಮುಧೋಳ ದೊಡ್ಡ ಊರು, ಅದಕ್ಕೂ dialyses machine ಗಳನ್ನು ಕೊಡಿ. ನಮ್ಮ ಕಡೆಯೂ ಬಡವರು ಇದ್ದಾರೆ ಸರ್ಕಾರಿ ಆಸ್ಪತ್ರೆಗೆ ಕೊಡಿ.

ಶ್ರೀ ಯು.ಟಿ. ಖಾದರ್:– ಅವರಿಗೆ ಕೊಟ್ಟ ನಂತರ next ನಿಮ್ಮ ಕಡೆಗೆ ಬರುತ್ತದೆ.

ಉಪಾಧ್ಯಕ್ಷರು:– ಆಯಿತು.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಂಜೂರಾತಿ

120(915); ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)

ಅ) ರಾಜ್ಯದಲ್ಲಿ ದೆಹಲಿಯ ಎಮ್ಸ್ (AIMS) ಮಾದರಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಉತ್ತರ ಕರ್ನಾಟಕದ ವಿಜಯಪುರದಲ್ಲಿ ಹಾಗೂ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಎಮ್ಸ್ ಮಾದರಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಈ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ;